**Tejas Networks Ltd.**
Regd. Office: Plot No. 25, 5th Floor
J.P. Software Park, Electronic City Phase 1
Hosur Road, Bengaluru 560 100, India
Tel : +91- 80- 4179 4600/700/800
Fax: +91- 80- 2852 0201

**July 17, 2026**

The Secretary
**National Stock Exchange of India Ltd**
Exchange Plaza, C/1, Block G,
Bandra Kurla Complex, Bandra (East)
Mumbai – 400 051
**NSE Symbol: TEJASNET**

The Secretary
**BSE Limited**
P J Towers,
Dalal Street,
Mumbai – 400 001
**BSE Scrip Code: 540595**

Dear Sir/Madam,

**Re: Newspaper Publication - Disclosure under Regulation 30 of SEBI (Listing Obligation and Disclosure Requirements) Regulations, 2015 ("SEBI Listing Regulations")**

Pursuant to Regulation 30 of SEBI Listing Regulations, we herewith enclose copies of newspaper publication regarding "Notice to Shareholders - Special Window for Transfer and Dematerialisation of Physical Securities", published in 'Financial Express' and 'Vishva Vani' on July 17, 2026.

The above information is also available on the website of the Company at www.tejasnetworks.com.

Thanking you,

Yours sincerely
**For Tejas Networks Limited**

ANANTHA MURTHY NARAYANA
Digitally signed by ANANTHA MURTHY NARAYANA
Date: 2026.07.17 14:52:18 +05'30'

**Anantha Murthy N**
**Company Secretary & Compliance Officer**

# ಗರ್ಭಿಣಿ ಪತ್ನಿಯನ್ನು ಕೊಂದು ಪತಿ ಆತ್ಮಹತ್ಯೆ

**ಬೆಂಗಳೂರು:** ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ನಾಲ್ಕು ತಿಂಗಳ ಗರ್ಭಿಣಿ ಪತ್ನಿಯನ್ನು ಉಸಿರುಗಟ್ಟಿಸಿ ಹತ್ಯೆಗೈದ ಪತಿ ನಂತರ ತಾನೂ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಸಿ.ಕೆ.ಅಚ್ಚುಕಟ್ಟು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.





ಸ್ವಪ್ನಾ (28) ಹತ್ಯೆಯಾದ ವರು. ಪತ್ನಿ ಕೊಂದು ಮನೋಜ್ ಆತ್ಮಹತ್ಯೆ ಮಾಡಿಕೊಂಡ ಪತಿ. ಉತ್ತರ ಪ್ರದೇಶದ ಈ ಇಬ್ಬರೂ ಹಲವು ವರ್ಷಗಳಿಂದ ನಗರದಲ್ಲಿ ವಾಸವಾಗಿದ್ದರು. ಮನೋಜ್ ಕಾರ್ಪೆಂಟರ್ ಕೆಲಸ ಮಾಡುತ್ತಿ ದ್ದರೆ, ಪತ್ನಿ ಗೃಹಿಣಿಯಾಗಿದ್ದರು. ನಾಲ್ಕು ದಿನಗಳಿಂದ ಕೆಲಸಕ್ಕೆ ಹೋಗದೆ ಮನೋಜ್ ಮನೆಯಲ್ಲಿದ್ದ. ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ದಂಪತಿ ಮಧ್ಯೆ ಸಣ್ಣಪುಟ್ಟ ಜಗಳ ನಡೆಯುತ್ತಿತ್ತು. ಗುರುವಾರ ಮತ್ತೆ ಮಧ್ಯಾಹ್ನ ಜಗಳ ನಡೆದು ವಿಕೋಪಕ್ಕೆ ಹೋಗಿದೆ. ಈ ವೇಳೆ ಮನೆಯಲ್ಲಿದ್ದ ನಾಯಿಯ ಕುತ್ತಿಗೆಗೆ ಹಾಕುವ ನೈಲಾನ್ ಹಗ್ಗದಿಂದ ಪತ್ನಿಯ ಕುತ್ತಿಗೆ ಬಿಗಿದು ಹತ್ಯೆ ಮಾಡಿದ್ದಾನೆ. ಬಳಿಕ ತಪ್ಪಿನ ಅರಿವಾಗಿ ಹೆದರಿ ಅದೇ ಹಗ್ಗದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ನೆರೆಹೊರೆ ಮನೆಯವರು ವಿಷಯ ತಿಳಿಸಿದ ನಂತರ ಸ್ಥಳಕ್ಕೆ ದೌಡಾಯಿಸಿ ಪರಿಶೀಲಿಸಿ ಇಬ್ಬರ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಲಾಯಿತು.

# ಅಮುಕು ಡುಮುಕು ಮಂಜನ ವಿರುದ್ಧ ಎಫ್ಐಆರ್

**ಬೆಂಗಳೂರು:** ಮಹಿಳಾ ಸಿಬ್ಬಂದಿ ಜತೆ ಅನುಚಿತವಾಗಿ ವರ್ತಿಸಿರುವ ಆರೋ ಪದ ಮೇಲೆ ಸಾಮಾಜಿಕ ಜಾಲತಾಣದ ಸನ್ನಿ ಹಿಡಿದ ಮಂಜು ಅಲಿಯಾಸ್ ಅಮುಕು ಡುಮುಕು ವಿರುದ್ಧ ಎಫ್ಐಆರ್ ದಾಖಲಾಗಿದೆ. ಅನ್ನಪೂರ್ಣೇ ಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೆಸ್ಟೋ ಬಾರ್‌ನಲ್ಲಿ ಮಹಿಳಾ ಸಿಬ್ಬಂದಿ ಜತೆ ಅನುಚಿತವಾಗಿ ವರ್ತಿಸಿದ್ದಾರೆ ಹಾಗೂ ಬಿಲ್ ನೀಡಲು ನಿರಾಕರಿಸಿದ ನಂತರ ಕೊಲೆ ಬೆದರಿಕೆ ಹಾಕಿದ್ದಾನೆ. ಜು.9ರ ರಾತ್ರಿ ರೆಸ್ಟೋ ಬಾರ್‌ಗೆ ಹೋಗಿದ್ದ ಮಂಜು ಅಲಿಯಾಸ್ ಅಮುಕು ಡುಮಕು ಊಟ ಮತ್ತು ಮದ್ಯ ಸೇವನೆ ಮಾಡಿದ್ದಾನೆ.

ಈ ವೇಳೆ ಬಿಲ್ ಕೇಳಿದ ಮಹಿಳಾ ಸಿಬ್ಬಂದಿ ಜತೆ ಅನುಚಿತವಾಗಿ ವರ್ತಿಸಿ ದ್ದಾನೆ. ಬಳಿಕ ಹೊರಗೆ ಹೋಗುತ್ತಿದ್ದಾಗ ತಡೆದು ಪ್ರಶ್ನೆ ಮಾಡಿದ್ದ ಮಹಿಳಾ ಸಿಬ್ಬಂದಿಗೆ ಸೆಲ್ಫಿ ಫೋಟೋ ಕೊಡುವಂತೆ ಕೇಳಿದ್ದಾನೆ.

ಇದೇ ವೇಳೆ ಸ್ಥಳದಲ್ಲಿದ್ದ ಪಬ್ ಮ್ಯಾನೇ ಜರ್ ಮೇಲೆ ಹಲ್ಲೆಗೆ ಯತ್ನಿಸಿದ್ದು, ಕೊಲೆ ಬೆದರಿಕೆ ಹಾಕಿದ್ದಾನೆ. ಅಮುಕು ಡುಮುಕು ಹಾಗೂ ಮತ್ತವರ ಸ್ನೇಹಿತರ ವಿರುದ್ಧ ಎಫ್ಐಆರ್ ದಾಖಲಾಗಿದ್ದು, ಅನ್ನಪೂರ್ಣೇಶ್ವರಿ ನಗರ ಪೊಲೀಸರು ಆರೋಪಿಗಳಿಗೆ ವಿಚಾರಣೆ ಹಾಜರಾ ಗುವಂತೆ ನೋಟಿಸ್ ಜಾರಿ ಮಾಡಿದ್ದಾರೆ.

## ಪತಿ ವಿರುದ್ಧ ಪತ್ನಿ ದಾಖಲಿಸಿದ್ದ 9ನೇ ಎಫ್ಐಆರ್‌ಗೆ ಹೈಕೋರ್ಟ್ ತಡೆ

# ಮನೆಗೆ ಹೋಗುವುದು ಅತಿಕ್ರಮವಲ್ಲ

**ಬೆಂಗಳೂರು:** ಇಂಗ್ಲೆಂಡಿನಿಂದ ಬಹಳ ಸಮಯದ ನಂತರ ಮನೆಗೆ ಬಂದ ಪತಿಯ ವಿರುದ್ಧ ಅತಿಕ್ರಮ ಪ್ರವೇಶ ಆರೋಪದ ಮೇಲೆ ಪತ್ನಿ ದಾಖಲಿಸಿದ ಪ್ರಕರಣಕ್ಕೆ (9ನೇ ಪ್ರಕರಣ) ಸಂಬಂಧಿಸಿದ ತನಿಖೆಗೆ ಹೈಕೋರ್ಟ್ ತಡೆ ನೀಡಿ ಆದೇಶಿಸಿದೆ.



ಮನೆಯ ಅತಿಕ್ರಮ ಪ್ರವೇಶ ಆರೋಪದ ಮೇಲೆ ತಮ್ಮ ವಿರುದ್ಧ ಪತ್ನಿ ಸುಮಿತ್ರಾ, ಸೇಪುರಿ ಅವರು ಮಹದೇವಪುರ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಎಫ್ಐಆರ್ ರದ್ದುಡಿಸುವಂತೆ ಕೋರಿ ಕುಂದಲಹಳ್ಳಿ ನಿವಾಸಿ ಸತ್ಯನಾರಾಯಣ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ಮನೆಯನ್ನು ಅತಿಕ್ರಮ ಪ್ರವೇಶ ಮಾಡಿದ ಆರೋಪದ ಮೇಲೆ ಈಗ 9ನೇ ಕೇಸ್ ದಾಖಲಿಸಲಾಗಿದೆ. ಪತಿಯ ಹೆಸರಿನಲ್ಲಿಯೇ ಮನೆ ಇದೆ ಎಂದು ಆತನ ಪರ ವಕೀಲರು ವಾದಿಸಿದ್ದಾರೆ. ಪತ್ನಿ ಮತ್ತು ಪತಿಯ ಜಂಟಿ ಹೆಸರಿನಲ್ಲಿದೆ ಎಂದು ಪತ್ನಿ ಪರ ವಕೀಲರು ಹೇಳುತ್ತಿದ್ದಾರೆ. ಆದಾಗ್ಯೂ, ಮನೆಯ ಮೇಲೆ ಪತಿಗೆ ಹಕ್ಕು ಇದ್ದೇ ಇರುತ್ತದೆ. ತನ್ನ ಮನೆಯೊಳಗೆ ತಾನು ಹೋದ ಕಾರಣಕ್ಕೆ ಪತಿಯ ಮೇಲೆ ಅತಿಕ್ರಮ ಪ್ರವೇಶ ಕೇಸ್ ಹಾಕಲಾಗದು. ಆದ್ದರಿಂದ, ಅರ್ಜಿದಾರ ಪತಿಯ ಮೇಲೆ ಪತ್ನಿ ದಾಖಲಿಸಿರುವ ಅತಿಕ್ರಮ ಪ್ರವೇಶ ಪ್ರಕರಣಕ್ಕೆ ಸಂಬಂಧಿಸಿದ ತನಿಖೆಗೆ ಅರ್ಜಿ ವಿಲೇವಾರಿಯಾಗುವರೆಗೆ ತಡೆ ನೀಡಲಾಗುತ್ತಿದೆ ಎಂದು ಪೀಠ ಆದೇಶದಲ್ಲಿ ತಿಳಿಸಿದೆ.

**ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ:**

ಅರ್ಜಿದಾರರ ಪರ ವಕೀಲ ಚಿನ್ನಸ್ವಾಮಿ ಮನೋಹರ್ ಅವರು, ಅರ್ಜಿದಾರರು ಆತ ಸ್ವಾಯಾರ್ಜಿತ ಸಂಪಾದಿಸಿದ ಮನೆಗೆ ಹೋದರೆ, ಅತಿಕ್ರಮ ಪ್ರವೇಶ ಆರೋಪದ ಮೇಲೆ ಹೆಂಡತಿ ಆತನ ಮೇಲೆ ದೂರು ದಾಖಲಿಸಿದ್ದಾರೆ. ಅರ್ಜಿದಾರರ ಹೆಸರಿನಲ್ಲಿರುವ ಮನೆಯ ಕ್ರಯ ಪತ್ರ ಸಹ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಪತ್ನಿ ಅರ್ಜಿದಾರರನ ಮೇಲೆ 10 ಕೇಸ್ ಹಾಕಿದ್ದಾರೆ. ಐಪಿಸಿ ಸೆಕ್ಷನ್ 498ಅ ಆರೋಪದ ಮೇಲಿನ ಎಫ್ಐಆರ್ ಇಟ್ಟುಕೊಂಡು ಹೋಗಿ ಎಲ್ಲ ಕಡೆ ಆಕ್ಷೇಪ ಮಾಡುತ್ತಾರೆ. ಹೆಂಡತಿ ಗಂಡನ ಮೇಲೆ 10 ಪ್ರಕರಣ ದಾಖಲಿಸಿದರೆ, ಬದುಕು ಯಾವ ಪರಿಸ್ಥಿತಿಗೆ ತಲುಪುತ್ತದೆ. ಅರ್ಜಿದಾರರ ಪರಿಸ್ಥಿತಿಯು ಬದುಕು ಜಟಕಾಬಂಡಿ; ವಿಧಿಯದರ ಸಾಹೇಬ ಎಂಬಂತಾಗಿದೆ ಎಂದು ಪೀಠದ ಮುಂದೆ ಅಳಲು ತೋಡಿಕೊಂಡರು.

ಅದಕ್ಕೆ ಪ್ರತಿಕ್ರಿಯಿಸಿದ ಪೀಠವು ಬದುಕು ಜಟಕಾಬಂಡಿ? ಅಂದರೆ ಬಂಡಿ ಕೆಳಗೆ ಅರ್ಜಿದಾರರು ಇದ್ದಾರಾ? ಎಂದು ಲಘುದಾಟಿಯಲ್ಲಿ ಹೇಳಿತು. ಅದಕ್ಕೆ ಅರ್ಜಿದಾರರ ಪರ ವಕೀಲರು ಹೌದು ಎಂದರಲ್ಲದೆ, ಮದುವೆಗೋ ಮಸಣಕೋ ಹೋಗೆಂದ ಕಡೆಗೋಡುಪದ ಕುಸಿಯೆ ನೆಲವಿಹುದು ಎಂದರು. ಆಗ ಪೀಠವು ನೀವು ನ್ಯಾಯಾಲಯದಲ್ಲಿ ಸಿನಿಮಾ ಹಾಡು ಹಾಡಲು ಹೋಗಬೇಡಿ ಎಂದು ಹೇಳಿದರು.

**ನಗೆಗಡಲಲ್ಲಿ ತೇಲಿದ ಕೋರ್ಟ್ ಹಾಲ್:**

ಅರ್ಜಿದಾರನ ಪರ ವಕೀಲರು, ಸ್ವಾಮಿ.. ಗಂಡನ ಪರಿಸ್ಥಿತಿ ಏನಾಗಿದೆ ಎಂದರೆ 10 ಕೇಸುಗಳನ್ನು ಪತ್ನಿ ದಾಖಲಿಸಿದ್ದಾರೆ. ಇದರಿಂದ ಗಂಡನಿಗೆ ತನ್ನ ಮನೆಗೆ ಹೋಗಲು ಸಾಧ್ಯವಾಗುತ್ತಿಲ್ಲ. 25 ವರ್ಷ ಕಷ್ಟಪಟ್ಟು ಹಗಲು ರಾತ್ರಿ ಓದಿ, ಕೆಲಸ ಮಾಡಿ 2 ಕೋಟಿ ರು. ಕೊಟ್ಟು ಮೂರು ರೂಮುಗಳಿರುವ ಮನೆ ತೆಗೆದುಕೊಂಡಿದ್ದಾರೆ. ಮದುವೆಯಾಗಿ 16 ವರ್ಷ ಆಗಿದೆ. 14 ವರ್ಷದ ಮಗನಿದ್ದಾನೆ. ಅರ್ಜಿದಾರನಿಗೆ ತನ್ನ ಮಗನನ್ನು ನೋಡಲು ಆಗುತ್ತಿಲ್ಲ. ಪತ್ನಿ ಪತಿಯ ವಿರುದ್ಧ ದಾಖಲಿಸಿರುವ ಪ್ರಕರಣವನ್ನು ಹೈಕೋರ್ಟೇ ರದ್ದುಪಡಿಸಬೇಕು. ಏಕೆಂದರೆ ಪ್ರಕರಣದಲ್ಲಿ ಅಪರಾಧದ ಅಂಶಗಳೇ ಇಲ್ಲ ಎಂದು ಮನವಿ ಮಾಡಿದರು. ನ್ಯಾಯಮೂರ್ತಿಗಳು ಹಾಗಾದರೆ ಪ್ರಕರಣವನ್ನು ಸುಪ್ರೀಂಕೋರ್ಟ್‌ಗೆ ಕಳಿಸಲಾಗುತ್ತದೆಯೇ. ಹೈಕೋರ್ಟೇ ತೀರ್ಮಾನ ಮಾಡುತ್ತದೆ ಬಿಡಿ. ನೋಡಿ ಪತ್ನಿ ಪರ ವಕೀಲರು ತುಂಬಾ ಮೌನವಾಗಿದ್ದಾರೆ. ಅವರಂತೆ ಇರಬೇಕು ಎಂದು ಲಘು ದಾಟಿಯಲ್ಲಿ ಹೇಳಿದರು. ಆಗ ಅರ್ಜಿದಾರನ ಪರ ವಕೀಲರು ಅವರಿಗೆ ಏನಾಗಬೇಕು. ಕೇಸು ಹಾಕಿದ್ದಾರೆ. ಅದಕ್ಕೆ ಅವರು ಮೌನವಾಗಿರುತ್ತಾರೆ. ಆದರೆ, ನಾನು ಮೌನವಾಗಿರಲು ಸಾಧ್ಯವಾಗುತ್ತದೆಯೇ ಎಂದರು. ಈ ಮಾತು ಕೇಳಿ ನ್ಯಾಯಮೂರ್ತಿಗಳು ಸೇರಿ ಕೋರ್ಟ್ ಹಾಲ್‌ನಲ್ಲಿ ನೆರೆದವರೆಲ್ಲರೂ ನಗೆಗಡಲಿನಲ್ಲಿ ತೇಲಿದರು.


**PUBLIC NOTICE**

General Public is informed that, Mr.Manjunath.R S/o Mr.Rangappa, has lost original property document i.e., Original Sale Deed dated 10.11.2022 executed by Mrs.Manjamma and others in favour of Mr.Manjunath S/o.Rangappa, registered document No.NMG-1-10929-2022-23, in Book I, Stored in C.D.No.NMGD1471, SRO-Nelamangala, Bangalore Rural District, pertaining to immovable property bearing Site No.03, Khaneshumari No.69/54/4/03, formed in duly converted Sy.No.65/4, Situated at Gandragulipura Village, Kasaba Hobli, Nelamangala Taluk, Bangalore Rural District, Measuring East to West: 20 Feet and North to South: 30 Feet, in all totally measuring 600 Square Feet. A Complaint is lodged in Crime Branch Bangalore City Police on dated 14.07.2026, Lost Report No.2306277/2026. Finders may return the same to the above said Police Station or contact at the below address within 07 days from this publication.

**Sri.Prashanth.Kumar.K BA LLB**
**"LEX FACTUM",**
Advocate and Legal Consultant,
No.690, 2 nd Floor, 36 th Cross, 11 th Main,
Rajajinagar 2 nd Block, Bangalore-560 010

# ಮೊಮ್ಮಗನಿಂದ ಅಜ್ಜಿ ಕೊಲೆ

**ಬೆಂಗಳೂರು:** ಬುದ್ಧಿವಾದ ಹೇಳಿದ್ದಕ್ಕೆ ಅಜ್ಜಿಯನ್ನೇ ಮೊಮ್ಮಗ ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಬನ್ನೇರುಘಟ್ಟ ಪೊಲೀಸ್ ಠಾಣಾ ವ್ಯಾಪ್ತಿಯ ಕಂಚಗ ಯ್ಯದೊಡ್ಡಿಯಲ್ಲಿ ನಡೆದಿದೆ.



ಗೌರಮ್ಮ (65) ಮೃತ ವೃದ್ಧೆ. ಪ್ರಜ್ವಲ್ ಕೊಲೆ ಮಾಡಿದ ಮೊಮ್ಮಗ. ಪ್ರಜ್ವಲ್ ಎಲ್ಲಿಯೂ ಕೆಲಸಕ್ಕೆ ಹೋಗದೇ ಗಾಂಜಾ, ಕುಡಿತದ ವ್ಯಸನಿಯಾಗಿದ್ದ. ಮಗ ಕೈ ತಪ್ಪುತ್ತಿದ್ದಾನೆ ಎಂದು ಅಜ್ಜಿ ಆತನ ತಾಯಿಗೆ ಹೇಳಿದ್ದಾರೆ. ನಶೆಯಲ್ಲಿ ಮನೆಗೆ ಬಂದು ಗಲಾಟೆ ಮಾಡಿದಾಗ ಅಜ್ಜಿ ಆತನಿಗೆ ಬುದ್ಧಿ ಹೇಳಿದ್ದರು. ಇದರಿಂದ ರೊಚ್ಚಿಗೆದ್ದ ಮೊಮ್ಮಗ ಮನೆಯಲ್ಲಿ ಯಾರೂ ಇಲ್ಲದ ವೇಳೆ ಚಾಕುವಿನಿಂದ ಇರಿದು ಅಜ್ಜಿಯ ಕೊಲೆ ಮಾಡಿದ್ದಾನೆ. ಘಟನೆ ಸಂಬಂಧ ಬನ್ನೇರುಘಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಆ. 29ರಂದು ಬಾಕಿ ಉಳಿದ ಕ್ರೀಡಾ ಪ್ರಶಸ್ತಿಗಳ ವಿತರಣೆ: ಉಪಮುಖ್ಯಮಂತ್ರಿ ಜಿ.ಪರಮೇಶ್ವರ

# ರಾಜ್ಯದ 32 ಕಡೆ 36 ಕೋಟಿ ರು. ವೆಚ್ಚದಲ್ಲಿ ಕ್ರೀಡಾಂಗಣ ಅಭಿವೃದ್ಧಿ

**ವಿಶ್ವವಾಣಿ ಸುದ್ದಿಮನೆ ಬೆಂಗಳೂರು**

ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಪರೀಕ್ಷೆಯಿಂದ ವಂಚಿತರಾಗದಂತೆ ಮಹತ್ವದ ನಿರ್ಧಾರ ಕೈಗೊಂಡಿರುವ ರಾಜ್ಯ ಸರಕಾರ, ಕ್ರೀಡಾಪಟು ವಿದ್ಯಾರ್ಥಿಗಳಿಗೆ ಹಾಜರಾತಿಯಲ್ಲಿ ವಿಶೇಷ ವಿನಾಯಿತಿ ನೀಡಿದೆ. ಜತೆಗೆ ಸರಕಾರಿ ಉದ್ಯೋಗಗಳಲ್ಲಿ ಕ್ರೀಡಾಪಟುಗಳಿಗೆ ಶೇ.2ರಷ್ಟು ಮೀಸಲಾತಿ, ಅಂತರರಾಷ್ಟ್ರೀಯ ಕ್ರೀಡಾಪಟುಗಳಿಗೆ ವಿಶೇಷ ಪ್ರೋತ್ಸಾಹಧನ, ಕ್ರೀಡಾಂಗಣಗಳ ಅಭಿವೃದ್ಧಿ ಸೇರಿದಂತೆ ಹಲವು ಮಹತ್ವದ ಯೋಜನೆ ಘೋಷಿಸಿದೆ ಎಂದು ಡಿಸಿಎಂ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ. ಜಿ. ಪರಮೇಶ್ವರ ತಿಳಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಬೆಂಗಳೂರಿನ ನೃಪತುಂಗ ರಸ್ತೆಯ ಯವನಿಕಾ ಸಭಾಂಗಣದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಹಾಗೂ ರಾಷ್ಟ್ರಮಟ್ಟದ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳಿಗೆ ಶೇ.15ರಷ್ಟು ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಶೇ.25ರಷ್ಟು ಹಾಜರಾತಿ ವಿನಾಯಿತಿ ನೀಡಲಾಗಿದ್ದು, ಈ ಸಂಬಂಧ ಈಗಾಗಲೇ ಸರಕಾರಿ ಆದೇಶ ಹೊರಡಿಸಲಾಗಿದೆ. ವಿದ್ಯಾರ್ಥಿಗಳ ಹಾಜರಾತಿ ಶೇ.50ರಷ್ಟು ಇದ್ದರೂ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು ಎಂಬ ನಿರ್ಧಾರ ಸರಕಾರ ಕೈಗೊಂಡಿದೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆಗಳಲ್ಲಿ ಭಾಗವಹಿಸುವ ಕಾರಣದಿಂದ ಹಾಜರಾತಿ ಕೊರತೆಯಾಗುವ ವಿದ್ಯಾರ್ಥಿಗಳು ಪರೀಕ್ಷೆಯಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಈ ಕ್ರಮ ಜಾರಿಗೊಳಿಸಲಾಗಿದೆ ಎಂದರು.



> **ಕಳೆದ ಎರಡು ವರ್ಷಗಳಿಂದ ಬಾಕಿ ಉಳಿದಿರುವ ಏಕಲವ್ಯ, ಕ್ರೀಡಾ ರತ್ನ, ಕ್ರೀಡಾ ಪೋಷಕ ಹಾಗೂ ಜೀವಮಾನ ಸಾಧನೆ ಪ್ರಶಸ್ತಿಗಳನ್ನು ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಅಂಗವಾಗಿ ಆಗಸ್ಟ್ 29ರಂದು ಹಾಕಿ ದಿಗ್ಗಜ ಮೇಜರ್ ಧ್ಯಾನ್ ಚಂದ್ ಅವರ ಜನ್ಮದಿನದಂದು ವಿತರಿಸಲಾಗುವುದು.**
> **-ಡಾ.ಜಿ.ಪರಮೇಶ್ವರ,** ಡಿಸಿಎಂ

**ಕರ್ನಾಟಕ ಪ್ರತಿನಿಧಿಸುವ ಪ್ರತಿ ಕ್ರೀಡಾಪಟುವಿಗೆ 5 ಲಕ್ಷ ರು. ಪ್ರೋತ್ಸಾಹಧನ:**

ಕಾಮನ್‌ವೆಲ್ತ್ ಗೇಮ್ಸ್, ಏಷ್ಯನ್ ಗೇಮ್ಸ್ ಹಾಗೂ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಕರ್ನಾಟಕ ಪ್ರತಿನಿಧಿಸುವ ಪ್ರತಿಯೊಬ್ಬ ಕ್ರೀಡಾಪಟುವಿಗೂ 5 ಲಕ್ಷ ರು. ವಿಶೇಷ ಪ್ರೋತ್ಸಾಹಧನ ನೀಡಲಾಗುವುದು. ಇದು ಪದಕ ವಿಜೇತರಿಗೆ ನೀಡುವ ನಗದು ಪುರಸ್ಕಾರಕ್ಕೆ ಹೆಚ್ಚುವರಿಯಾಗಿರುತ್ತದೆ. ಜತೆಗೆ ಪದಕ ಗೆದ್ದ ಕ್ರೀಡಾಪಟುಗಳಿಗೆ 'ಎ' ಮತ್ತು 'ಬಿ' ಗುಂಪಿನ ಹುದ್ದೆಗಳಲ್ಲಿ ವಿಶೇಷ ನೇಮಕಾತಿ ನೀಡಲಾಗುತ್ತಿದೆ. ಈಗಾಗಲೇ 13 ಕ್ರೀಡಾಪಟುಗಳಿಗೆ ನೇಮಕಾತಿ ಆದೇಶ ನೀಡಲಾಗಿದ್ದು, ಅವರಲ್ಲಿ 11 ಮಂದಿ ಕರ್ತವ್ಯಕ್ಕೆ ಹಾಜರಾಗಿದ್ದಾರೆ. ರಾಜ್ಯದ ಕ್ರೀಡಾ ಮೂಲಸೌಕರ್ಯ ಬಲಪಡಿಸುವ ನಿಟ್ಟಿನಲ್ಲಿ 32 ಸ್ಥಳಗಳಲ್ಲಿ 36 ಕೋಟಿ ರು. ವೆಚ್ಚದಲ್ಲಿ ಕ್ರೀಡಾಂಗಣಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಕಂಠೀರವ ಕ್ರೀಡಾಂಗಣ ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಂಗಣವಾಗಿ ಪುನರ್ ಅಭಿವೃದ್ಧಿಪಡಿಸುವ ಯೋಜನೆಯೂ ಸರಕಾರ ಮುಂದಿದೆ.

ಕ್ರೀಡಾ ಇಲಾಖೆಯಲ್ಲಿ ಖಾಲಿ ಇರುವ 50 ಖಾಯಂ ತರಬೇತುದಾರರ ಹುದ್ದೆಗಳ ನೇಮಕಾತಿಗೆ ಆರ್ಥಿಕ ಇಲಾಖೆ ಅನುಮೋದನೆ ನೀಡಿದ್ದು, ಶೀಘ್ರದಲ್ಲೇ ನೇಮಕಾತಿ ಪ್ರಕ್ರಿಯೆ ಆರಂಭವಾಗಲಿದೆ. ರಾಜ್ಯದಲ್ಲಿ ಮೊದಲ ಬಾರಿಗೆ ಅಂತಾರಾಷ್ಟ್ರೀಯ ಮಟ್ಟದ ಯುವ ಜನೋತ್ಸವ ಡಿಸೆಂಬರ್ ಅಥವಾ ಜನವರಿಯಲ್ಲಿ ಆಯೋಜಿಸುವ ಯೋಜನೆ ರೂಪಿಸಲಾಗಿದ್ದು, ರಾಜ್ಯದ ಸಂಸ್ಕೃತಿ, ಕ್ರೀಡೆ ಹಾಗೂ ಯುವಶಕ್ತಿ ಜಗತ್ತಿಗೆ ಪರಿಚಯಿಸುವ ವೇದಿಕೆಯಾಗಲಿದೆ. ಇದೇ ವರ್ಷದಿಂದ ತಾಲ್ಲೂಕು ಮಟ್ಟದಲ್ಲಿಯೇ ವ್ಯವಸ್ಥಿತ ದಸರಾ ಕ್ರೀಡಾಕೂಟಗಳನ್ನು ಆಯೋಜಿಸಲಾಗುವುದು. ಉನ್ನತ ಶಿಕ್ಷಣ ಸಚಿವರಾಗಿದ್ದಾಗ ಸಿಇಟಿಯಲ್ಲಿ ಕ್ರೀಡಾಪಟುಗಳಿಗೆ ಮೀಸಲಾತಿ ಜಾರಿಗೊಳಿಸಲಾಗಿತ್ತು. ಅದರ ಫಲವಾಗಿ ಈ ವರ್ಷ 115 ಕ್ರೀಡಾಪಟು ವಿದ್ಯಾರ್ಥಿಗಳು ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಸೀಟುಗಳನ್ನು ಪಡೆದಿದ್ದಾರೆ ಎಂದರು.

# ಹುಂಡಿ ರಕ್ಷಣೆಗೆ ಭದ್ರತೆ

**ಬೆಂಗಳೂರು:** ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಸೇರಿರುವ ದೇವಾಲಯಗಳ ಹುಂಡಿಗಳ ರಕ್ಷಣೆಗೆ ರಾಜ್ಯ ಸರಕಾರ ಕಠಿಣ ಕ್ರಮ ಕೈಗೊಂಡಿದೆ ಎಂದು ಉಪಮು ಖ್ಯಮಂತ್ರಿ ಡಾ.ಜಿ.ಪರಮೇಶ್ವರ ತಿಳಿಸಿದ್ದಾರೆ. ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಸೇರಿದ 39 ಸಾವಿರ ದೇವಸ್ಥಾನ ಗಳಿವೆ. 'ಎ' ವರ್ಗದ ದೇವಸ್ಥಾನಗಳಿಗೆ ಸಾಕಷ್ಟು ಹಣ ಬರುತ್ತಿದೆ. ಭಕ್ತರು ಹುಂಡಿಗಳಲ್ಲಿ ಕಾಣಿಕೆಯನ್ನು ಹಾಕುತ್ತಾರೆ. ಹೀಗಾಗಿ ಪ್ರತಿಯೊಂದು ಹುಂಡಿ ಮೇಲೆ ನಿಗಾವಹಿ ಸಲು 4 ಕಡೆಗಳಿಂದ ಸಿಸಿಟಿವಿ ಅಳವಡಿಸಿ, ಕೇಂದ್ರ ಕಚೇರಿ ಯಿಂದ ನಿಗಾವಹಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು. ದೇವಸ್ಥಾನಗಳನ್ನು ಸಂಪೂರ್ಣವಾಗಿ ಸಿಸಿಟಿವಿ ಮೂಲಕ ನಿಗಾವಹಿಸಲು ನಿಯಂತ್ರಣ ಕೊಠಡಿ ಮಾಡಲಾಗುವುದು. ದೇವಸ್ಥಾನಗಳಲ್ಲಿ ಕಾಣಿಕೆ ಹುಂಡಿ ಕಳ್ಳತನ ಮತ್ತು ಲೆಕ್ಕಪತ್ರ ನಿರ್ವಹಣೆಯಲ್ಲಾಗುತ್ತಿರುವ ದುರುಪಯೋಗ ತಡೆಗಟ್ಟಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಹೊರ ರಾಜ್ಯದ ಪ್ರಮುಖ ಯಾತ್ರಾ ಸ್ಥಳಗಳಲ್ಲಿ ರಾಜ್ಯ ಮುಜರಾಯಿ ಇಲಾಖೆಯ ಆಸ್ತಿ ಇದೆ. ಅಲ್ಲಿನ ಆಸ್ತಿ ಸಂರಕ್ಷಣೆ ಮಾಡಬೇಕು. ತಿರುಪತಿಯಲ್ಲಿ ನಮ್ಮ ರಾಜ್ಯಕ್ಕೆ ಸೇರಿದ 7 ಎಕರೆ ಭೂಮಿ ಇದೆ. ಅಲ್ಲಿಗೆ ತೆರಳುವ ಯಾತ್ರಾರ್ಥಿಗಳಿಗೆ ಉಳಿದುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಶೀಘ್ರದಲ್ಲಿ ಅದೇ ಪ್ರಕಾರ, ಶ್ರೀಶೈಲ, ವಾರಣಾಸಿ, ತುಳಜಾಪುರದಲ್ಲೂ ಮುಜರಾಯಿ ಇಲಾಖೆಗೆ ಸೇರಿದ ಆಸ್ತಿ ಇದೆ. ವಸತಿಗೃಹ, ಯಾತ್ರಿಗಳಿಗೆ ಉಳಿದುಕೊಳ್ಳಲು ಮೂಲಸೌಕರ್ಯ ವ್ಯವಸ್ಥೆ ಕಲ್ಪಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಹೇಳಿದರು. 'ಎ' ವರ್ಗದ ದೇವಸ್ಥಾನದಲ್ಲಿ ಸಾಕಷ್ಟು ಹಣವಿದೆ. ಕೆಲವು ದಿನಗಳ ಹಿಂದೆ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿ ನೀಡಿದಾಗ ಅಲ್ಲಿನ ವ್ಯವಸ್ಥೆಯನ್ನು ಪರಿಶೀಲನೆ ನಡೆಸಿದ್ದೇನೆ. ಯಾತ್ರಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮಾಸ್ಟರ್ ಪ್ಲಾನ್ ಮಾಡುವಂತೆ ಸೂಚನೆ ನೀಡಲಾಗಿದೆ ಎಂದರು.

> **ಶ್ರೀ ಕೃಷ್ಣದೇವರಾಯ ಕಾಲದಲ್ಲಿ ತಿರುಪತಿಯಲ್ಲಿ ಮೊದಲ ಆರತಿ ಮಾಡಲು ವಿಜಯನಗರ ಸಂಸ್ಥಾನದವರಿಗೆ ಸಿಗುತ್ತಿತ್ತು. ನಂತರ ಮೈಸೂರು ಅರಸರಿಗೆ ಕೊಡಲಾಯಿತು. ಪ್ರಜಾಪ್ರಭುತ್ವ ವ್ಯವಸ್ಥೆ ಬಂದ ಬಳಿಕ ಸಿಎಂ ಅವರು ಭಾಗವಹಿಸಬಹುದು ಎನ್ನುವ ನಿಯಮ ಬಂತು. ಈಗಿನ ಸಿಎಂ ರಾಜ್ಯದ ಪ್ರತಿನಿಧಿಗಳಿಗೆ ಅವಕಾಶ ಮಾಡಿಕೊಡಬೇಕು ಎನ್ನುವ ಬೇಡಿಕೆಯನ್ನು ಇಟ್ಟದ್ದಾರೆ.**
> **- ಡಾ.ಜಿ. ಪರಮೇಶ್ವರ,** ಗೃಹ ಸಚಿವ

**ಅನುಬಂಧ IV-ಎ**

**ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟದ ಸೂಚನೆ**

ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6)ರ ನಿಬಂಧನೆಗೊಂದಿಗೆ ಓದಲಾಗುವ ಸೆಕ್ಯುರೈಟೇಶನ್ ಆ್ಯಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆ್ಯಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ, 2002ರಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟದ ಸಲುವಾಗಿ ಇ-ಹರಾಜು ಮಾರಾಟ ಸೂಚನೆ.

ಈ ಮೂಲಕ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರು (ಗಳು) ಮತ್ತು ಗ್ಯಾರಂಟರ (ಗಳು) ರಿಗೆ ಸೂಚನೆ ನೀಡುವುದೇನೆಂದರೆ, **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) (CIN : L65922DL2005PLC136029)** (**''ಸೆಕ್ಯೂರ್ಡ್ ಕ್ರೆಡಿಟರ್''**) ಇವರಿಗೆ ಮಾರ್ಟ್‌ಗೇಜ್ ಮಾಡಲಾದ/ಚಾರ್ಜ್ ಮಾಡಲಾದ ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿ(ಗಳು)ಯ **ಭೌತಿಕ ಸ್ವಾಧೀನತೆಯನ್ನು** ಸೆಕ್ಯೂರ್ಡ್ ಕ್ರೆಡಿಟರರ ಅಧಿಕೃತ ಅಧಿಕಾರಿಯವರು ಪಡೆದುಕೊಂಡಿದ್ದು, ಆಯಾ ಸಾಲ ಖಾತೆಗಳ ವಿರುದ್ಧ ಈ ಕೆಳಗಿನ ಬಾಕಿ ಮೊತ್ತವನ್ನು ವಸೂಲಿ ಮಾಡಲು, **''ಎಲ್ಲಿದ್ದೆಯೊ ಹಾಗೆ'', ''ಏನಿದೆಯೊ ಹಾಗೆ'' ಮತ್ತು ''ಯಾವುದೇ ರಿಕೋರ್ಸ್ ಇಲ್ಲದ''** ಆಧಾರದಲ್ಲಿ ತಾರೀಖು **18.08.2026** ರಂದು **ಸಂಜೆ 05.00** ರಿಂದ **ಸಂಜೆ 06.00** ರವರೆಗೆ ತನಕ ಮಾರಾಟ ಮಾಡಲಿದ್ದಾರೆ :

| ಕ್ರಮ. ಸಂಖ್ಯೆ | ಸಾಲದ ಖಾತೆ ಸಂ. | ದಿನಾಂಕ 08.07.2026 ರಂತೆ ಬಾಕಿ ಇರುವ ಮೊತ್ತಗಳು (ರೂ.ಗಳಲ್ಲಿ). |
| --- | --- | --- |
| 1. | HHEMAL00286883 | ರೂ. 76,80,145/- (ರೂಪಾಯಿ ಎಪ್ಪತ್ತ ಆರು ಲಕ್ಷ ಎಂಬತ್ತು ಸಾವಿರದ ನೂರ ನಲವತ್ತ ಐದು ಮಾತ್ರ) |
| 2. | HHLMAL00285511 | ರೂ. 28,16,628/- (ರೂಪಾಯಿ ಇಪ್ಪತ್ತ ಎಂಟು ಲಕ್ಷ ಹದಿನಾರು ಸಾವಿರದ ಆರು ನೂರ ಇಪ್ಪತ್ತ ಎಂಟು ಮಾತ್ರ) |
| 3. | HLAPMAL00381541 | ರೂ. 24,42,469/- (ರೂಪಾಯಿ ಇಪ್ಪತ್ತ ನಾಲ್ಕು ಲಕ್ಷ ನಲವತ್ತ ಎರಡು ಸಾವಿರದ ನಾಲ್ಕು ನೂರ ಅರವತ್ತ ಒಂಬತ್ತು ಮಾತ್ರ) |
| ಒಟ್ಟು | | ರೂ. 1,29,39,242/- (ರೂಪಾಯಿ ಒಂದು ಕೋಟಿ ಇಪ್ಪತ್ತ ಒಂಬತ್ತು ಲಕ್ಷ ಮೂವತ್ತ ಒಂಬತ್ತು ಸಾವಿರದ ಇನ್ನೂರ ನಲವತ್ತ ಎರಡು ಮಾತ್ರ) |

ಮೇಲೆ ನೀಡಲಾದ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಮೊತ್ತಗಳು ಸುರಕ್ಷಿತ ಸಾಲಗಾರರ ಆಯಾ ಸಾಲ ಖಾತೆಗಳಿಗೆ ಬಾಕಿ ಉಳಿದಿವೆ, ಬಾಕಿ ಇರುವ ಅಸಲು, ಬಾಕಿ (ಸಂಚಿತ ತಡವಾದ ಶುಲ್ಕಗಳು ಸೇರಿದಂತೆ) ಮತ್ತು ಬಡ್ಡಿ **08.07.2026** ರವರೆಗೆ ಸಾಲ ಒಪ್ಪಂದ(ಗಳು) ಮತ್ತು ಇತರ ಸಂಬಂಧಿತ ಸಾಲ ದಾಖಲೆ(ಗಳು) ಪ್ರಕಾರ ಅನ್ವಯವಾಗುವ ಭವಿಷ್ಯದ ಬಡ್ಡಿಯೊಂದಿಗೆ **09.07.2026** ರಿಂದ ಜಾರಿಗೆ ಬರುವಂತೆ **ಬೋಜನ್ ಹರಿಹರನ್ ಅಲಿಯಾಸ್ ಹರಿಹರನ್ ಬೋಜನ್** ಮತ್ತು **ಅಖಿಲಾ ಸಿ ವಿ** ಸುರಕ್ಷಿತ ಸಾಲಗಾರರಿಗೆ ಬಾಕಿ ಇರುವ ಕಾನೂನು ವೆಚ್ಚಗಳು ಮತ್ತು ಇತರ ಶುಲ್ಕಗಳು.

ಸ್ಥಿರಾಸ್ತಿ(ಗಳ)ಯ ರಿಸರ್ವ್ ಬೆಲೆ **ರೂ. 1,48,00,000/- (ರೂಪಾಯಿ ಒಂದು ಕೋಟಿ ನಲವತ್ತ ಎಂಟು ಲಕ್ಷ ಮಾತ್ರ)** ಆಗಿದೆ ಮತ್ತು ಅರ್ನೆಸ್ಟ್ ಮನಿ ಡಿಪಾಸಿಟ್ (**''ಇಎಮ್‌ಡಿ''**) **ರೂ. 14,80,000/- (ರೂಪಾಯಿ ಹದಿನಾಲ್ಕು ಲಕ್ಷ ಎಂಬತ್ತು ಸಾವಿರ ಮಾತ್ರ)** ಅಂದರೆ, ರಿಸರ್ವ್ ಬೆಲೆಯ 10%ಕ್ಕೆ ಸಮನಾಗಿದೆ.

**ಸ್ಥಿರಾಸ್ತಿ(ಗಳ) ವಿವರಣೆ**

**ಫ್ಲಾಟ್ ಸಂಖ್ಯೆ** 103, **ಬೆಂಗಳೂರು ದಕ್ಷಿಣ ತಾಲ್ಲೂಕಿನ ಇಬ್ಬಲೂರು ಗ್ರಾಮದ ಬೇಗೂರು ಹೋಬಳಿಯಲ್ಲಿ ನೆಲೆಗೊಂಡಿರುವ ಖಾತಾ ಸಂಖ್ಯೆ** 341 **ರ ಸರ್ವೆ ಸಂಖ್ಯೆ** 20 **ಮತ್ತು** 23 **ರಲ್ಲಿ ರೂಪುಗೊಂಡ ''ಗ್ಯಾಲಕ್ಸಿ'' ಸನ್ಸಿಟಿ ಅಪಾರ್ಟ್ಮೆಂಟ್ಸ್, ಎಂದು ಕರೆಯಲ್ಪಡುವ ಕಟ್ಟಡದ** 9 **ನೇ ಬ್ಲಾಕ್ನ ಮೊದಲ ಮಹಡಿಯಲ್ಲಿ** 1824 **ಚದರ ಅಡಿ ವಿಸ್ತೀರ್ಣದ ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಹೊಂದಿದ್ದು ಇದು ಸರ್ಜಾಪುರ ಹೊರ ವರ್ತುಲ ರಸ್ತೆ, ಬೆಂಗಳೂರು**-560037 **ಸ್ಥಿತವಾಗಿದ್ದು ಬೇಸ್ಮೆಂಟ್ನಲ್ಲಿ ಒಂದು ಮುಚ್ಚಿದ ಕಾರ್ ಪಾರ್ಕಿಂಗ್ ಸ್ಥಳ ಹೊಂದಿರುವ ಸಂಖ್ಯೆ** 98 **ಜೊತೆಗೆ** 379.39 **ಚದರ ಅಡಿ ಅವಿಭಜಿತ ಪಾಲು ಹಾಗೂ ಈ ಭೂಮಿಯ ಎಲ್ಲಾ ಭಾಗಗಳು.**

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಸುರಕ್ಷಿತ ಸಾಲಗಾರರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ಉಲ್ಲೇಖಿಸಿ ಅಂದರೆ www.sammaancapital.com; ಸಂಪರ್ಕ ಸಂಖ್ಯೆ: 0124-6910910, +91 7065451024; ಇ-ಮೇಲ್ ಐಡಿ : auctionhelpline@sammaancapital.com. ಬಿಡ್ಡಿಂಗ್‌ಗಾಗಿ, www.auctionfocus.in ಗೆ ಲಾಗಿನ್ ಮಾಡಿ.

**ಸಹಿ**
**ಅಧಿಕಾರಯುಕ್ತ ಅಧಿಕಾರಿ**
**ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್**
**(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)**

**ದಿನಾಂಕ : 10.07.2026**
**ಸ್ಥಳ : ಬೆಂಗಳೂರು**

**ಸ್ವಾಧೀನ ಸೂಚನೆ**
(ಸ್ಥಿರ ಆಸ್ತಿಗಾಗಿ)

**ಈ ಕಾರಣದಿಂದ:**

**ಇಂಡಿಯಾ ಎಸ್‌ಎಂಇ ಅಸೆಟ್ ರೀಕನ್ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ (ಐಎಸ್‌ಎಆರ್‌ಸಿ) (CIN:U67190MH2008PLC181062)** ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **09.04.2026** ರಂದು ಕರೆದು ಸಾಲಗಾರ **ಜಾವೀದ್ ಹುಸೇನ್ ಮಾಲೀಕರು ಜಾವೀದ್ ಬೆಡ್ಡಿಂಗ್ ಹೌಸ್ ಮತ್ತು ಫರ್ನಿಶಿಂಗ್ಸ್, ಅಮೀನಾ ಬೆಗಮ್ ಮತ್ತು ವಿಕಾರ್ ಯೂನಸ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 1,41,81,696 (ಒಂದು ಕೋಟಿ ನಲವತ್ತೊಂದು ಲಕ್ಷದ ಎಂಬತ್ತು ಒಂದು ಸಾವಿರದ ಆರುನೂರ ತೊಂಬತ್ತಾರು ರೂಪಾಯಿಗಳು ಮಾತ್ರ)** ಸಾಲ ಖಾತೆ ನಂ. **HLLAMYS00472083** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **31.03.2026** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **15.07.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಇಂಡಿಯಾ ಎಸ್‌ಎಂಇ ಅಸೆಟ್ ರೀಕನ್ಸ್ಟ್ರಕ್ಷನ್ ಕಂಪನಿ ಲಿಮಿಟೆಡ್** ನ ಬಾಕಿ ಇರುವ ಮೊತ್ತ **ರೂ. 1,41,81,696 (ಒಂದು ಕೋಟಿ ನಲವತ್ತೊಂದು ಲಕ್ಷದ ಎಂಬತ್ತು ಒಂದು ಸಾವಿರದ ಆರುನೂರ ತೊಂಬತ್ತಾರು ರೂಪಾಯಿಗಳು ಮಾತ್ರ) 31.03.2026** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

**ಸ್ಥಿರಾಸ್ತಿಯ ವರ್ಣನೆ**

ಆಸ್ತಿಯ ಆ ಎಲ್ಲಾ ತುಣುಕು ಮತ್ತು ಪಾರ್ಸೆಲ್ ಸೈಟ್ ಮತ್ತು ಆರ್.ಸಿ.ಸಿ. ಅಂಗಡಿ ಕಟ್ಟಡವನ್ನು ಒಳಗೊಂಡಿದೆ ಥೆರಿಯಾನ್‌ನಲ್ಲಿ ಸುಭಾಷ್ ಸ್ಕ್ವೇರ್ ಮುಖ್ಯ ರಸ್ತೆ, ಹಾಸನ ನಗರ, ಬೇರಿಂಗ್ ಡೋರ್ ಸಂಖ್ಯೆ 25, ಬೇರಿಂಗ್ ಆಸ್ತಿ ಐಡಿ ಸಂಖ್ಯೆ 23-1-508-25, ಹಳೆಯ ಖಾತಾ ಸಂಖ್ಯೆ 600-660-661, ಎಸ್‌ಎಎಸ್ ಸಂಖ್ಯೆ 401, ವಾರ್ಡ್ ಸಂಖ್ಯೆ 23, ಶರೀಫ್ ಕಾಲೋನಿ ಆಫ್ ಸಿಟಿ ಮುನ್ಸಿಪಲ್ ಕೌನ್ಸಿಲ್, ಹಸನ್ ಸೈಟ್ ಪೂರ್ವದಿಂದ ಪಶ್ಚಿಮಕ್ಕೆ 10.6680 ಮೀಟರ್ (35 ಅಡಿ) ಮತ್ತು ದಕ್ಷಿಣಕ್ಕೆ ಉತ್ತರಕ್ಕೆ: 6.096012 ಮೀಟರ್ (20 ಅಡಿ) ಅಂದರೆ, 65.0323 ಚದರ ಮೀಟರ್ ಮತ್ತು ನೆಲಮಾಳಿಗೆಯಲ್ಲಿ ಆರ್.ಸಿ.ಸಿ. ಅಂಗಡಿ ಕಟ್ಟಡಗಳನ್ನು ಹೊಂದಿದೆ 55.7418 ಚದರ ಮೀಟರ್ ಮತ್ತು ಆರ್.ಸಿ.ಸಿ. ಅಂಗಡಿ ಕಟ್ಟಡಗಳನ್ನು ಹೊಂದಿದೆ ನೆಲಮಾಳಿಗೆಯಲ್ಲಿ ಅಳತೆ ಮಾಡಲಾಗಿದೆ 55.7418 ಚದರ ಮೀಟರ್ ಮತ್ತು ಆರ್.ಸಿ.ಸಿ. ಅಂಗಡಿ ಕಟ್ಟಡವನ್ನು ಹೊಂದಿದೆ. ಕರ್ನಾಟಕದ ಹಸನ್-5732101 ರಲ್ಲಿ ನೆಲೆಗೊಂಡಿರುವ ಮೊದಲ ಮಹಡಿಯಲ್ಲಿನ ಕಟ್ಟಡವು 55.7418 ಚದರ ಮೀಟರ್ ಅಳತೆ ಮತ್ತು ಸಂಪೂರ್ಣ ಆರ್.ಸಿ.ಸಿ. ಕಟ್ಟಡವು ಒಟ್ಟು 167.2254 ಚದರ ಮೀಟರ್ ಅಳತೆಯನ್ನು ಹೊಂದಿದೆ ಮತ್ತು ಸಂಪೂರ್ಣ ಆಸ್ತಿಯನ್ನು ಈ ಕೆಳಗಿನಂತೆ ಬಂಧಿಸಲಾಗಿದೆ:-

ಪೂರ್ವ : ಸುಭಾಷ್ ಸ್ಕ್ವೇರ್ ಮುಖ್ಯ ರಸ್ತೆ
ಪಶ್ಚಿಮದಲ್ಲಿ : ಹಳೆಯ ತರಕಾರಿ ಮಾರುಕಟ್ಟೆ ಪ್ರದೇಶ
ಉತ್ತರದಲ್ಲಿ : ಶ್ರೀಮತಿ ಕುಸುಮಾಂಬಾ ಅವರ ಆಸ್ತಿ
ದಕ್ಷಿಣದಲ್ಲಿ : ಹಳೆಯ ತರಕಾರಿ ಮಾರುಕಟ್ಟೆಗೆ ಕಾರಣವಾಗುವ ಸಂರಕ್ಷಣಾ ವ್ಯವಸ್ಥೆ

**ಅಧಿಕಾರವಿರುವ ಅಧಿಕಾರಿ**
**ಇಂಡಿಯಾ ಎಸ್‌ಎಂಇ ಅಸೆಟ್ ರೀಕನ್ಸ್ಟ್ರಕ್ಷನ್ ಕಂಪನಿ ಲಿಮಿಟೆಡ್**
**ಐಎಸ್‌ಎಆರ್‌ಸಿ -2025-2026-5 ಟ್ರಸ್ಟ್‌ನ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿದೆ.**

**ದಿನಾಂಕ: 15.07.2026**
**ಸ್ಥಳ : ಹಸನ್**

# ಮರಗಳನ್ನು ಕಡಿಯದಂತೆ ನೀಡಿದ್ದ ಮಧ್ಯಂತರ ಆದೇಶ ಮುಂದುವರಿಕೆ

**ಬೆಂಗಳೂರು:** ಹೆಬ್ಬಾಳದಿಂದ ಸಿಲ್ಕ್ ಬೋರ್ಡ್ ವರೆಗೆ ನಿರ್ಮಿಸಲು ಉದ್ದೇಶಿಸಿರುವ ಸುರಂಗ ರಸ್ತೆ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಆಗಸ್ಟ್ 20ಕ್ಕೆ ನಿಗದಿಪಡಿಸಿದೆ.



ಸುರಂಗ ರಸ್ತೆ ಯೋಜನೆಗೆ ಮಧ್ಯಂತರ ತಡೆಯಾಜ್ಞೆ ನೀಡುವಂತೆ ಪ್ರಕಾಶ್ ಬೆಳವಾಡಿ, ಡಾ. ಎ.ರವೀಂದ್ರ, ಸಿಟಿಜನ್ ಆಕ್ಷನ್ ಫೋರಂ ಸಲ್ಲಿಸಿದ್ದ ಪಿಐಎಲ್ ಅರ್ಜಿಯನ್ನು ವಿಚಾರಣೆ ನಡೆಸಿದ ಕೋರ್ಟ್, ಕಾಮಗಾರಿ ಹೈಕೋರ್ಟ್‌ನ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ. ಪಿಐಎಲ್ ಬಾಕಿಯಿರುವ ಬಗ್ಗೆ ಗುತ್ತಿಗೆದಾರರಿಗೆ ಮಾಹಿತಿ ನೀಡಲು ಸೂಚನೆ ನೀಡಿ ವಿಚಾರಣೆ ಮುಂದೂಡಿದೆ. ಅರ್ಜಿದಾರರ ಪರ ತೇಜಸ್ವಿ ಸೂರ್ಯ, ಹಿರಿಯ ವಕೀಲ ಡಿ.ಆರ್.ರವಿಶಂಕರ್ ವಾದ ಮಂಡಿಸಿದರು.

ಕಳೆದ ವಿಚಾರಣೆಯ ವೇಳೆ ನ್ಯಾಯಾಲಯವು ಸರಕಾರ, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ರಾಜ್ಯ ಪರಿಸರ ಅಧ್ಯಯನ ಮೌಲ್ಯಮಾಪನ ಪ್ರಾಧಿಕಾರ, ನಗರ ಭೂಸಾರಿಗೆ ನಿರ್ದೇಶನಾಲಯ, ಬೆಂಗಳೂರು ಸ್ಮಾರ್ಟ್ ಮೂಲಸೌಕರ್ಯ ನಿಯಮಿತ(ಸ್ಮೆಲ್) ರಾಡಿಕ್ ಕನ್ಸಲ್ಟೆಂಟ್ಸ್ ಮತ್ತು ಆಲ್ಟಿನೋಕ್ ಕನ್ಸಲ್ಟೆಂಟ್ಸ್ ಸೇರಿ ಎಲ್ಲಾ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆ ಮುಂದೂಡಿತ್ತು.

ಅಲ್ಲದೆ, ಲಾಲ್ಬಾಗ್ ಬೊಟಾನಿಕಲ್ ಗಾರ್ಡನ್ನಂತಹ ಸೂಕ್ಷ್ಮ ಪ್ರದೇಶಗಳ ಅಡಿಯಲ್ಲಿ ಸುರಂಗ ನಿರ್ಮಾಣ ಮಾಡುವುದರಿಂದ ಆಗುವ ಅಪಾಯಗಳ ಬಗ್ಗೆ ಜಿಯೋಲಾಜಿಕಲ್ ಸರ್ವೆ ಆಫ್ ಇಂಡಿಯಾದಿಂದ ಅಭಿಪ್ರಾಯ ಪಡೆಯುವಂತೆ ಸೂಚಿಸಿತ್ತು.

**ಹಿನ್ನೆಲೆ:** ಬೆಂಗಳೂರು ಮಹಾನಗರದ ಸಂಚಾರ ದಟ್ಟಣೆ ಸಮಸ್ಯೆ ಪರಿಹರಿಸುವ ಸಲುವಾಗಿ ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗೆ ಸುಮಾರು 19 ಸಾವಿರ ಕೋಟಿ ರು. ವೆಚ್ಚದಲ್ಲಿ ಸುರಂಗ ಮಾರ್ಗ ಯೋಜನೆ ಪ್ರಸ್ತಾಪಿಸಲಾಗಿದೆ. ಬೆಂಗಳೂರು ಜೋಡಿ ಸುರಂಗ ರಸ್ತೆ ಯೋಜನೆಗೆ 2025ರ ಜು.14ರಂದು ಕರೆದಿರುವ ಟೆಂಡರ್ ಅಧಿಸೂಚನೆ ರದ್ದುಗೊಳಿಸುವಂತೆ ಅರ್ಜಿಯಲ್ಲಿ ಕೋರಲಾಗಿದೆ.

# ಅಣ್ಣನ ಪ್ರೀತಿ ನಿರಾಕರಿಸಿದ್ದಕ್ಕೆ ತಮ್ಮನಿಂದ ಯುವತಿಯ ಕೊಲೆ

**ಬೆಂಗಳೂರು:** ಅಣ್ಣನ ಪ್ರೀತಿ ನಿರಾಕರಿಸಿದ ಯುವತಿಯನ್ನು ಆತನ ತಮ್ಮ ಚಾಕು ಇರಿದು ಬರ್ಬರವಾಗಿ ಹತ್ಯೆಗೈದ ಘಟನೆ ಕೋಡಿ ಹಳ್ಳಿಯ ಎಚ್‌ಎಎಲ್ ರಸ್ತೆಯಲ್ಲಿ ನಡೆದಿದೆ.



ಅಮೃತಾ ಮೃತ ದುರ್ದೈವಿಯಾಗಿದ್ದು, ಈಕೆಗೆ ಜು.13ರಂದು ಕೋಡಿಹಳ್ಳಿಯಲ್ಲಿ ಸೂರ್ಯ ಎಂಬಾತ ಚಾಕು ಇರಿದಿದ್ದ. ಈ ವೇಳೆ ಗಂಭೀರ ಗಾಯಗೊಂಡಿದ್ದ ಆಕೆಯನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಚಿಕಿತ್ಸೆಗೆ ಸ್ಪಂದಿಸದ ಅಮೃತಾ ಪ್ರಾಣಬಿಟ್ಟಿದ್ದಾರೆ.

ಅಮೃತಾ ಮತ್ತು ಆರೋಪಿ ಸೂರ್ಯ ಸಹೋದರ ಧನುಷ್ ಪರಸ್ಪರ ಪ್ರೀತಿಸುತ್ತಿ ದ್ದರು. ಇವರೆಲ್ಲ ಒಂದೇ ಏರಿಯಾದವರಾ ಗಿದ್ದು, ಓಂ ಶಕ್ತಿ ಮಾಲೆ ಹಾಕುವ ವೇಳೆ ಎರಡು ಕುಟುಂಬಗಳ ನಡುವೆ ಪರಿಚಯವಾಗಿತ್ತು. ಅದೇ ಪರಿಚಯದಿಂದ ಧನುಷ್ ಮತ್ತು ಅಮೃತಾ ಆತ್ಮೀಯರಾಗಿದ್ದರು. ಬಳಿಕ ಪರಸ್ಪರ ಪ್ರೀತಿಸಲು ಆರಂಭಿಸಿದ್ದರು. ಧನುಷ್‌ಗೆ ಅದಾಗಲೇ ಮದುವೆಯಾಗಿ 1 ಮಗುವಿದ್ದು, ಪತ್ನಿಯಿಂದ ಆತ ವಿಚ್ಛೇದನ ಪಡೆದಿದ್ದ.

> - ವಂಚಕ ಪ್ರೇಮಿಯೊಬ್ಬನ ಮದುವೆ ಪ್ರಸ್ತಾಪವನ್ನು ನಿರಾಕರಿಸಿದ ಕಾರಣಕ್ಕೆ ಯುವತಿ ಕೊಲೆ
> - ಬೆಂಗಳೂರಿನ ಎಚ್‌ಎಎಲ್ ರಸ್ತೆಯ ಕೋಡಿಹಳ್ಳಿಯಲ್ಲಿ ಭೀಕರ ಘಟನೆ

ಆದರೆ ಈ ವಿಚಾರವನ್ನು ಅಮೃತಾಳಿಂದ ಮುಚ್ಚಿಟ್ಟಿದ್ದ. ನಂತರ ವಿಷಯ ಗೊತ್ತಾದ ಬಳಿಕ ಧನುಷ್‌ನಿಂದ ಅಮೃತಾ ದೂರವಾಗಿದ್ದರು. ಇದೇ ವಿಚಾರಕ್ಕೆ ಜು.13ರಂದು ಯುವತಿ ಮನೆ ಬಳಿ ಧನುಷ್ ಸಹೋದರ ಸೂರ್ಯ ಗಲಾಟೆ ಮಾಡಿದ್ದು, ಚಾಕು ಇರಿದಿದ್ದ. ಪ್ರಕರಣ ಸಂಬಂಧ ಆರೋಪಿಗಳಾದ ಸೂರ್ಯ ಮತ್ತು ಧನುಷ್‌ನನ್ನು ಪೊಲೀಸರು ಬಂಧಿಸಿದ್ದು, ಜೀವನ್‌ಭೀಮಾನಗರ ಠಾಣೆಯಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿದೆ.

**ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್**

TEJAS NETWORKS

ನೋಂದಾಯಿತ ಕಚೇರಿ: ಜೆ.ಪಿ. ಸಾಫ್ಟ್‌ವೇರ್ ಪಾರ್ಕ್, ಪ್ಲಾಟ್ ನಂ. 25, ಸರ್ವೇ ನಂ. 13, 14, 17 & 18, ಕೋನಪ್ಪನ ಅಗ್ರಹಾರ ವಿಲೇಜ್, ಬೇಗೂರು ಹೋಬಳಿ, ಬೆಂಗಳೂರು-560 100, ಕರ್ನಾಟಕ, ಭಾರತ.
ಕಾರ್ಪೋರೇಟ್ ಐಡೆಂಟಿಟಿ ನಂಬರ್: L72900KA2000PLC026980
ದೂರವಾಣಿ: +91 80 4179 4600 ಫ್ಯಾಕ್ಸ್: +91 80 2852 0201
ಇ-ಮೇಲ್: corporate@tejasnetworks.com ವೆಬ್‌ಸೈಟ್: www.tejasnetworks.com

**ಷೇರುದಾರರಿಗೆ ಸೂಚನೆ – ಭೌತಿಕ ಷೇರುಗಳ ವರ್ಗಾವಣೆ ಮತ್ತು ಡಿಮೆಟೀರಿಯಲೈಸೇಶನ್‌ಗಾಗಿ ವಿಶೇಷ ವ್ಯವಸ್ಥೆ**

ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (SEBI) ಇವರ ಜನವರಿ 30, 2026ರ ಸುತ್ತೋಲೆಯ ಪ್ರಕಾರ, ಏಪ್ರಿಲ್ 01, 2019ಕ್ಕಿಂತ ಮೊದಲು ಮಾರಾಟವಾದ / ಖರೀದಿಸಿದ ಭೌತಿಕ ಷೇರುಗಳ ವರ್ಗಾವಣೆ ಮತ್ತು ಡಿಮೆಟೀರಿಯಲೈಸೇಶನ್ ("ಡಿಮ್ಯಾಟ್") ಅನ್ನು ಸುಲಭಗೊಳಿಸಲು ವಿಶೇಷ ಗವಾಕ್ಷಿಯನ್ನು ತೆರೆಯಲು ಅವಕಾಶ ನೀಡಿದೆ. ಈ ವಿಶೇಷ ವ್ಯವಸ್ಥೆಯು, ಭೌತಿಕ ಷೇರುಗಳು ಏಪ್ರಿಲ್ 01, 2019ಕ್ಕಿಂತ ಮೊದಲು ಕಂಪನಿಗೆ ಸಲ್ಲಿಸಲಾಗಿ ಮತ್ತು ದಾಖಲೆಗಳು / ಪ್ರಕ್ರಿಯೆಗಳು ಹಾಗೂ ಇತರ ಕಾರಣಗಳಿಂದ ತಿರಸ್ಕರಿಸಲ್ಪಟ್ಟ / ಹಿಂತಿರುಗಿಸಲಾದ / ಗಮನಹರಿಸದ ಷೇರು ವರ್ಗಾವಣೆ ವಿನಂತಿಗಳಿಗೂ ಅನ್ವಯವಾಗುತ್ತದೆ.

**ಪ್ರಮುಖ ವಿವರಗಳು:**

| | |
| --- | --- |
| ಷೇರು ವರ್ಗಾವಣೆ ಮತ್ತು ಡಿಮೆಟೀರಿಯಲೈಸೇಶನ್‌ಗಾಗಿ ವಿಶೇಷ ವ್ಯವಸ್ಥೆ | ಅವಧಿ – ಫೆಬ್ರವರಿ 05, 2026 ರಿಂದ ಫೆಬ್ರವರಿ 04, 2027ರ ವರೆಗೆ |
| ಷೇರು ವರ್ಗಾವಣೆ ವಿನಂತಿಗಳನ್ನು ಯಾರು ಸಲ್ಲಿಸಬಹುದು? | ಏಪ್ರಿಲ್ 01, 2019ಕ್ಕಿಂತ ಮೊದಲು ಷೇರು ವರ್ಗಾವಣೆ ಪತ್ರಗಳನ್ನು ಸಲ್ಲಿಸಿದ ಹೂಡಿಕೆದಾರರು ಮತ್ತು ದಾಖಲೆಗಳಲ್ಲಿನ ನ್ಯೂನತೆಗಳಿಂದಾಗಿ ಅವುಗಳನ್ನು ತಿರಸ್ಕರಿಸಲ್ಪಟ್ಟ, ಹಿಂತಿರುಗಿಸಲಾದ ಅಥವಾ ಪ್ರಕ್ರಿಯೆಗೊಳಿಸದ ಹಾಗೂ ಏಪ್ರಿಲ್ 01, 2019ಕ್ಕಿಂತ ಮೊದಲು ಷೇರುಗಳನ್ನು ಮಾರಾಟ ಮಾಡಿದ / ಖರೀದಿಸಿದ ಹೂಡಿಕೆದಾರರು. |
| ಷೇರು ವರ್ಗಾವಣೆ ವಿನಂತಿಗಳನ್ನು ಹೇಗೆ ಸಲ್ಲಿಸುವುದು? | ಅರ್ಹ ಹೂಡಿಕೆದಾರರು ತಮ್ಮ ಷೇರು ವರ್ಗಾವಣೆ ವಿನಂತಿಗಳನ್ನು ಸಂಪೂರ್ಣ ಮತ್ತು ಸರಿಯಾದ ದಾಖಲೆಗಳೊಂದಿಗೆ ಕಂಪನಿಯ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟ್ ಅಂದರೆ MUFG ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ಗೆ ಮೇಲೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸಲ್ಲಿಸಲು ಕೋರಲಾಗಿದೆ.<br>ಅಂಚೆ ವಿಳಾಸ: ಸಿ–101, ಎಂಬೆಸಿ 247, ಎಲ್.ಬಿ.ಎಸ್. ಮಾರ್ಗ, ವಿಖ್ರೋಲಿ (ಪಶ್ಚಿಮ), ಮುಂಬೈ – 400 083.<br>ಸಹಾಯವಾಣಿ ಸಂಖ್ಯೆ / ಫ್ಯಾಕ್ಸ್: +91 9870391051, +91 22 6656 8494<br>ಯಾವುದೇ ಪ್ರಶ್ನೆಗಳಿಗೆ: **https://web.in.mpms.mufg.com/helpdesk/Service_Request.html** ನಲ್ಲಿ ಸೇವಾ ವಿನಂತಿಯನ್ನು ಸಲ್ಲಿಸಿ ಅಥವಾ **corporate@tejasnetworks.com** ಗೆ ಇಮೇಲ್ ಕಳುಹಿಸಿ. |

**ಗಮನಿಸಿ:**
ವರ್ಗಾವಣೆಗಾಗಿ ಸಲ್ಲಿಸಲಾದ ಷೇರುಗಳನ್ನು ಡಿಮೆಟೀರಿಯಲೈಸ್ಡ್ ವಿಧಾನದಲ್ಲಿ ಮಾತ್ರ ನೀಡಲಾಗುತ್ತದೆ. ಬಾಕಿ ಇರುವ ಷೇರು ವರ್ಗಾವಣೆ ಪ್ರಕರಣಗಳನ್ನು ಕ್ರಮಬದ್ಧಗೊಳಿಸಲು ಷೇರುದಾರರು ವಿಳಂಬವಿಲ್ಲದೆ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.

**ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್ ಪರವಾಗಿ**
**ಸಹಿ/–**
**ಅನಂತ ಮೂರ್ತಿ ಎನ್.**
ಕಂಪೆನಿ ಕಾರ್ಯದರ್ಶಿ ಮತ್ತು ಕಂಪ್ಲೆಯನ್ಸ್ ಅಧಿಕಾರಿ
ICSI ಸದಸ್ಯತ್ವ ಸಂಖ್ಯೆ: A17134

ಸ್ಥಳ : ಬೆಂಗಳೂರು
ದಿನಾಂಕ : ಜುಲೈ 16, 2026